ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 13-03-1990.

# *ಸಂಗಮಯುಗದಲ್ಲಿ ಅತ್ಮರೊಂದಿಗೆ ಪರಮಾತ್ಮನ ವಿಚಿತ್ರ ಮಿಲನ.*

(संगम पर परमात्मा का आत्माओं से विचित्र मिलन)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

- ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.
- ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.
- ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.
- ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಅನೇಕ ಬಾರಿ ಮಿಲನ ಮಾಡುವಂತಹ ಅಗಲಿಹೋಗಿ ಮರಳಿ ಸಿಕ್ಕಿರುವ ಮಕ್ಕಳು ಪುನಃ ಬಂದು ಸೇರಿದ್ದೀರಿ. ತಂದೆಯೂ ಸಹ ಅದೇ ಸ್ಮೃತಿಯಿಂದ ಮಕ್ಕಳನ್ನು ನೋಡುತ್ತಿದ್ದೇವೆ ಮತ್ತು ಮಕ್ಕಳೂ ಸಹ ಅದೇ!! "ಅನೇಕ ಬಾರಿ ಮಿಲನ ಮಾಡಿರುವ ಸ್ಮೃತಿ" ಯಿಂದ ಮಿಲನ ಮಾಡುತ್ತಿದ್ದೀರಿ. ಇದು ಅತ್ಮ ಮತ್ತು ಪರಮಾತ್ಮ ತಂದೆಯ ವಿಚಿತ್ರ ಮಿಲನವಾಗಿದೆ. ಇಡೀ ಕಲ್ಪದಲ್ಲಿ ಯಾವುದೇ ಅತ್ಮವು ಅನೇಕ ಬಾರಿಯ ಮಿಲನದ ನಂತರ ಪುನಃ ಬಂದು ಮಿಲನ ಮಾಡುತ್ತಿದ್ದೇವೆ ಎಂಬ ಸ್ಮೃತಿಯಿಂದ ಮಿಲನ ಮಾಡುವುದಿಲ್ಲ. ಸಮಯ-ಪ್ರತಿ ಸಮಯ ಧರ್ಮಪಿತರು ಬಂದಿದ್ದಾರೆ ಮತ್ತು ಅವರು ತಮ್ಮ ಅನುಯಾಯಿಗಳನ್ನು ಮೇಲಿನಿಂದ ಕೆಳಗೆ ಕರೆತಂದರು ಆದರೆ ಧರ್ಮಪಿತರೂ ಸಹ ಅನೇಕ ಕಲ್ಪಗಳಲ್ಲಿ ಮಿಲನ ಮಾಡಿರುವವರು ಪುನಃ ಮಿಲನ ಮಾಡುತ್ತಿದ್ದೇವೆ ಎಂಬ ಸ್ಮೃತಿಯಿಂದ ಮಿಲನ ಮಾಡುವುದಿಲ್ಲ. ಪರಮಾತ್ಮನ ವಿನಃ ಮತ್ತಾರೂ ಈ ಸ್ಪಷ್ಟ ಸ್ಮೃತಿಯಿಂದ ಆತ್ಮರೊಂದಿಗೆ ಮಿಲನ ಮಾಡಲು ಸಾಧ್ಯವಿಲ್ಲ. ಭಲೆ ಈ ಕಲ್ಪದಲ್ಲಿ ಮೊದಲ ಬಾರಿಯೇ ಮಿಲನ ಮಾಡಬಹುದು ಆದರೆ ಮಿಲನ ಮಾಡುತ್ತಿದ್ದಂತೆಯೇ ಹಳೆಯ ಸ್ಮೃತಿ, ಹಳೆಯ ಪರಿಚಯವು ಆತ್ಮದಲ್ಲಿ ಸಂಸ್ಕಾರ ರೂಪದಲ್ಲಿ ರೆಕಾರ್ಡ್‌ನಂತೆ ತುಂಬಲ್ಪಟ್ಟಿರುವುದು ಇಮರ್ಜ್ ಆಗಿಬಿಡುತ್ತದೆ ಮತ್ತು ಹೃದಯದಿಂದ ಇದೇ ಸ್ಮೃತಿಯ ಕೂಗು ಕೇಳಿಬರುತ್ತದೆ- ಇವರೇ ನನ್ನ ತಂದೆಯಾಗಿದ್ದಾರೆ. ನೀವೇ ನನ್ನವರಾಗಿದ್ದೀರಿ ಎಂದು ಮಕ್ಕಳು ಹೇಳುತ್ತೀರಿ ಮತ್ತು ತಂದೆಯು ನೀವು ನನ್ನವರಾಗಿದ್ದೀರಿ ಎಂದು ಹೇಳುತ್ತಾರೆ. ನನ್ನವರು ಎಂಬ ಸಂಕಲ್ಪವು ಉತ್ಪನ್ನವಾಯಿತು. ಅದೇ ಸೆಕೆಂಡ್ ಆ ಶಕ್ತಿಶಾಲಿ ಸ್ಮೃತಿಯಿಂದ, ಸಂಕಲ್ಪದಿಂದ ಹೊಸಜೀವನ, ಹೊಸಜಗತ್ತು ಸಿಕ್ಕಿಬಿಟ್ಟಿತು. ಮತ್ತು ಸದಾಕಾಲಕ್ಕಾಗಿ "ನನ್ನಬಾಬಾ" - ಈ ಸ್ಮೃತಿ ಸ್ವರೂಪದಲ್ಲಿ ಸ್ಥಿತರಾದಿರಿ. ಹೇಗೆ ಸ್ಮೃತಿ ಸ್ವರೂಪರಾದಿರಿ. ಆದ್ದರಿಂದ ಸ್ಮೃತಿಗೆ ಫಲಿತವಾಗಿ ಸಮರ್ಥ ಸ್ವರೂಪರಾದಿರಿ. ಸಮರ್ಥ ಸ್ವರೂಪರಾಗಿಬಿಟ್ಟಿರಲ್ಲವೆ. ನಿರ್ಬಲ ಸ್ವರೂಪರಲ್ಲ ತಾನೆ? ಮತ್ತು ಯಾರೆಷ್ಟು ಸ್ಮೃತಿಯಲ್ಲಿ ಇರುವರೋ ಅಷ್ಟು ಸಾಮರ್ಥತೆಯ ಅಧಿಕಾರವನ್ನು ಸ್ವತಹವಾಗಿಯೇ ಪ್ರಾಪ್ತಿ ಮಾಡಿಕೊಳ್ಳುತ್ತಾರೆ. ಎಲ್ಲಿ ಸ್ಮೃತಿಯಿರುವುದೋ ಅಲ್ಲಿ ಸಾಮರ್ಥ್ಯವು ಇದ್ದೇ ಇರುವುದು. ಸ್ವಲ್ಪ ವಿಸ್ಮೃತಿಯಿದ್ದರೂ ಸಹ ಅಲ್ಲಿ ವ್ಯರ್ಥ ಇರುವುದು. ವ್ಯರ್ಥ

ಸಂಕಲ್ಪ ಇರಬಹುದು, ಮಾತಿರಬಹುದು, ಕರ್ಮವೇ ಇರಬಹುದು. ಯಾವುದಾದರೊಂದು ವ್ಯರ್ಥ ಇರುವುದು ಆದ್ದರಿಂದ ಬಾಪ್‌ದಾದಾ ಎಲ್ಲಾ ಮಕ್ಕಳನ್ನು ಇದೇ ದೃಷ್ಟಿಯಿಂದ ನೋಡುತ್ತಾರೆ- ಪ್ರತಿಯೊಬ್ಬ ಮಗು ಸ್ಮೃತಿಸ್ವರೂಪ ಸೋ ಸಮರ್ಥನಾಗಿದೆ. ಇಂದಿನವರೆಗೂ ತಮ್ಮ ಸ್ಮರಣೆಯನ್ನು ಭಕ್ತರ ಮೂಲಕ ಕೇಳಿಸಿಕೊಳ್ಳುತ್ತಿದ್ದೀರಿ. ತಮ್ಮ ಸ್ಮೃತಿಯಲ್ಲಿ "ನನ್ನ ಬಾಬಾ" ಎಂಬುದನ್ನು ತಂದುಕೊಂಡಿರಿ ಆದ್ದರಿಂದ ಭಕ್ತಾತ್ಮರೂ ಸಹ ನನ್ನ ಇಷ್ಟದೇವ ಅಥವಾ ದೇವಿ ಎಂದೇ ಸ್ಮರಣೆ ಮಾಡುತ್ತಾರೆ. ಹೇಗೆ ತಾವು ಅತೀ ಪ್ರೀತಿಯಿಂದ, ಹೃದಯದಿಂದ ತಂದೆಯನ್ನು ನೆನಪು ಮಾಡಿದಿರೋ ಅಷ್ಟೇ ಭಕ್ತಾತ್ಮರೂ ತಾವು ಇಷ್ಟ ದೇವಾತ್ಮರನ್ನು ಹೃದಯದಿಂದ ಅತೀ ಪ್ರೀತಿಯಿಂದ ನೆನಪು ಮಾಡುತ್ತಾರೆ. ತಾವು ಬ್ರಾಹ್ಮಣ ಆತ್ಮರಲ್ಲಿಯೂ ಕೆಲವರು ಹೃದಯದ ಸ್ನೇಹ, ಸಂಬಂಧದಿಂದ ನೆನಪು ಮಾಡುತ್ತಾರೆ ಮತ್ತು ಇನ್ನೂ ಕೆಲವರು ಬುದ್ಧಿಯ ಮೂಲಕ ಜ್ಞಾನದ ಆಧಾರದ ಮೇಲೆ ಸಂಬಂಧವನ್ನು ಅನುಭವ ಮಾಡುವ ಪ್ರಯತ್ನವನ್ನು ಪದೇ-ಪದೇ ಮಾಡುತ್ತಾರೆ . ಎಲ್ಲಿ ಹೃದಯದ ಸ್ನೇಹ ಮತ್ತು ಸಂಬಂಧವು ಅತಿಪ್ರಿಯ ಅರ್ಥಾತ್ ಅತಿ ಸಮೀಪ ಇರುವುದೋ ಅಲ್ಲಿ ನೆನಪನ್ನು ಮರೆಯುವುದು ಕಷ್ಟವಾಗುತ್ತದೆ. ಇಲ್ಲಿ ಕೇವಲ ಜ್ಞಾನದ ಆಧಾರದ

ಮೇಲೆ ಸಂಬಂಧ ಇರುತ್ತದೆ ಆದರೆ ಎಲ್ಲಿ ಹೃದಯದ ಅಖಂಡ ಸ್ನೇಹ ಇರುವುದಿಲ್ಲವೋ ಅಲ್ಲಿ ಸ್ಮೃತಿ ಕೆಲವೊಮ್ಮೆ ಸಹಜ, ಕೆಲವೊಮ್ಮೆ ಕಷ್ಟವಾಗುತ್ತದೆ. ಹೇಗೆ ಶರೀರದಲ್ಲಿ ನರನರದಲ್ಲಿಯೂ ರಕ್ತವು ಸಮಾವೇಶವಾಗಿದೆಯೋ ಹಾಗೇಯೇ ಚಿತ್ತದಲ್ಲಿ ಪ್ರತೀಕ್ಷಣ ಸ್ಮೃತಿ ಸಮಾವೇಶವಾಗಿ ಇರುವುದು. ಇದಕ್ಕೆ ಹೃದಯದ ಸ್ನೇಹಸಂಪನ್ನ ನಿರಂತರ ನೆನಪು ಎಂದು ಹೇಳುತ್ತಾರೆ. ಹೇಗೆ ಭಕ್ತಾತ್ಮರು ತಂದೆಗಾಗಿ ಎಲ್ಲಿ ನೋಡಿದರೂ ನೀನೇ ನೀನು ಎಂದು ಹೇಳುತ್ತಾರೋ ಹಾಗೆಯೇ ತಂದೆಯ ಸ್ನೇಹಿ ಸಮಾನ ಆತ್ಮರನ್ನೂ ಸಹ ಯಾರು ನೋಡಿದರೂ ಸಹ ಇವರ ದೃಷ್ಟಿಯಲ್ಲಿ, ಮಾತಿನಲ್ಲಿ, ಕರ್ಮದಲ್ಲಿ ಪರಮಾತ್ಮ ತಂದೆಯೇ ಅನುಭವವಾಗುತ್ತಾರೆ. ಇದಕ್ಕೆ ಸ್ನೇಹಿಗಳಿಂದ ತಂದೆಯ ಸಮಾನರು ಎಂದು ಹೇಳಲಾಗುತ್ತದೆ. ಆಂದಾಗ ಎಲ್ಲರೂ ಸ್ಮೃತಿ ಸ್ವರೂಪರಾಗಿದ್ದೀರಿ. ಎಲ್ಲರ ಸಂಬಂಧವೂ ಇದೆ. ಅಧಿಕಾರವೂ ಇದೆ ಏಕೆಂದರೆ ಎಲ್ಲರ ಪೂರ್ಣ ಅಧಿಕಾರದ ಸಂಬಂಧವು ತಂದೆಯ ಮತ್ತು ಮಗುವಿನ ಸಂಬಂಧವಾಗಿದೆ. ಎಲ್ಲರೂ ಸಹ ನನ್ನ ಬಾಬಾ ಎಂದು ಹೇಳುತ್ತೀರಿ. ನನ್ನ ಚಿಕ್ಕಪ್ಪ, ನನ್ನ ದೊಡ್ಡಪ್ಪ ಎಂದು ಯಾರೂ ಹೇಳುವುದಿಲ್ಲ. ಅಧಿಕಾರದ (ತಂದೆಯ) ಸಂಬಂಧವಿರುವ ಕಾರಣ ಸರ್ವಪ್ರಾಪ್ತಿಗಳ ಆಸ್ತಿಗೆ ಅಧಿಕಾರಿಗಳಾಗಿದ್ದೀರಿ. 50 ವರ್ಷದವರಿರಬಹುದು, 6 ತಿಂಗಳಿನವರಿರಬಹುದು, ನನ್ನ ಬಾಬಾ' ಎಂದು ಹೇಳಿಬಿಡುವರು ಆದರೆ ವ್ಯತ್ಯಾಸವೇನಾಗುತ್ತದೆ! ತಂದೆಯು ಅಧಿಕಾರವನ್ನಂತೂ ಎಲ್ಲರಿಗೆ ಒಂದೇರೀತಿ ಕೊಡುತ್ತಾರೆ ಏಕೆಂದರೆ ಅಕ್ಷಯ(ಖಾಲಿಯಾಗದ) ಆಸ್ತಿಯನ್ನು ಕೊಡುವಂತಹ ದಾತನಾಗಿದ್ದಾರೆ. ಎರಡುವರೆ ಲಕ್ಷವಷ್ಟೇ ಅಲ್ಲ, ಸರ್ವಆತ್ಮರೂ ಸಹ ಅಧಿಕಾರಿಗಳಾಗಲಿ, ಅದಕ್ಕಿಂತಲೂ ಹೆಚ್ಚು ಖಜಾನೆಯು ತಂದೆಯ ಬಳಿಯಿದೆ. ಅಂದಮೇಲೆ ತಂದೆಯು ಏತಕ್ಕೆ ಕಡಿಮೆ ಕೊಡುವರು? ದಾತನು ಎಲ್ಲರಿಗೂ ಒಂದೇರೀತಿ ಕೊಡುತ್ತಾರೆ ಆದರೆ ಅದನ್ನು ತೆಗೆದುಕೊಳ್ಳುವುದರಲ್ಲಿ ಅಂತರವಿದೆ. ಕೆಲವರು ಪ್ರಾಪ್ತಿಗಳ ಆಸ್ತಿಯನ್ನು ಅಥವಾ ಖಜಾನೆಯನ್ನು ಸಮಯ ಪ್ರಮಾಣ ಸ್ವಯಂ ಪ್ರತಿ ಹಾಗೂ ಸೇವೆಯ ಪ್ರತಿ ಕಾರ್ಯದಲ್ಲಿ ತೊಡಗಿಸಿ ಅದರ ಲಾಭವನ್ನು ಅನುಭವ ಮಾಡುತ್ತಾರೆ ಆದ್ದರಿಂದ ತಂದೆಯ ಖಜಾನೆಯನ್ನು ತಮ್ಮ ಖಜಾನೆಯನ್ನಾಗಿ ಮಾಡಿಕೊಳ್ಳುತ್ತಾರೆ ಅರ್ಥಾತ್ ತನ್ನದರಲ್ಲಿ ಸಮಾವೇಶ ಮಾಡಿಕೊಳ್ಳುತ್ತಾರೆ. ಆದ್ದರಿಂದ ಪ್ರತಿಯೊಂದು ಖಜಾನೆಯನ್ನು ಉಪಯೋಗಿಸುವುದರ ಅನುಭವದಿಂದ ಖುಷಿ ಮತ್ತು ನಶೆಯಲ್ಲಿರುತ್ತಾರೆ. ಶುದ್ಧನಶೆಯಿರುತ್ತದೆ. ಉಲ್ಟಾನಶೆಯಲ್ಲ ಮತ್ತು ಇನ್ನೂ ಕೆಲವರು ಕೆಲವು ಖಜಾನೆ ಸಿಕ್ಕಿದೆ. ನನ್ನದಾಗಿದೆ ಎಂಬ ಖುಷಿಯಲ್ಲಿರುತ್ತಾರೆ. ಕೇವಲ ನನ್ನದಂತೂ ಆಗಿದೆ ಆದರೆ ಅದನ್ನು ಕಾರ್ಯದಲ್ಲಿ ತೊಡಗಿಸುವುದಿಲ್ಲ. ಯಾವುದೇ ಅಮೂಲ್ಯವಸ್ತುವನ್ನು ಕೇವಲ ತಮ್ಮಬಳಿ ಕೂಡಿಟ್ಟುಕೊಂಡಿದ್ದೀರಿ ಆದರೆ ಕೇವಲ ಇಟ್ಟುಕೊಳ್ಳುವುದು ಮತ್ತು ಅದನ್ನು ಉಪಯೋಗಿಸುವುದರ ಅನುಭೂತಿಯಲ್ಲಿ ಅಂತರವಿರುತ್ತದೆ. ಎಷ್ಟು ಕಾರ್ಯದಲ್ಲಿ ತೊಡಗಿಸುವರೋ ಅಷ್ಟು ಶಕ್ತಿಯು ಇನ್ನೂ ಹೆಚ್ಚುತ್ತದೆ. ಈ ಉಪಯೋಗಿಸುವ ಕೆಲಸವನ್ನು ಅವರು ಸದಾ ಮಾಡುವುದಿಲ್ಲ. ಕೆಲಕೆಲವೊಮ್ಮೆ ಮಾಡುತ್ತಾರೆ ಆದ್ದರಿಂದ ಸದಾ ಉಪಯೋಗಿಸುವವರಲ್ಲಿ ಮತ್ತು ಕೆಲಕೆಲವೊಮ್ಮೆ ಉಪಯೋಗಿಸುವವರಲ್ಲಿ ಅಂತರವಾಗುತ್ತದೆ. ಕಾರ್ಯದಲ್ಲಿ ತೊಡಗಿಸುವ ವಿಧಿಯನ್ನು ಉಪಯೋಗಿಸಿಕೊಳ್ಳುವುದಿಲ್ಲ ಅಂದಮೇಲೆ ದಾತನು ಕೊಡುವುದರಲ್ಲಿ

ವ್ಯತ್ಯಾಸ ಮಾಡುವುದಿಲ್ಲ ಆದರೆ ಅದನ್ನು ತೆಗೆದುಕೊಳ್ಳುವುದರಲ್ಲಿ ಅಂತವಾಗಿಬಿಡುತ್ತದೆ. ತಾವೆಲ್ಲರೂ ಯಾರಾಗಿದ್ದೀರಿ? ಕಾರ್ಯದಲ್ಲಿ ತೊಡಗಿಸುವವರೋ ಅಥವಾ ಕೇವಲ ಜಮಾ ಇರುವುದನ್ನು ನೋಡಿ ಖುಷಿಪಡುವವರೋ? ಮೊದಲ ನಂಬರಿನವರೋ ಅಥವಾ ಎರಡನೇ ನಂಬರಿನವರೋ?

ಬಾಪ್‌ದಾದಾರವರಿಗೂ ಇರುವ ಖುಷಿಯೇನೆಂದರೆ ಎಲ್ಲರೂ ನಂಬರ್‌ವನ್ ಆಗಿದ್ದೀರಿ ಎಂದು ಈ ಸಮಯದಲ್ಲಿ ನಂಬರ್‌ವನ್ ಆಗಿದ್ದೀರಾ? ಬಾಪ್‌ದಾದಾ ಸದಾ ಮಕ್ಕಳ ಬಾಯಲ್ಲಿ ಗುಲಾಬ್ ಜಾಮೂನ್ ಎಂದು ಹೇಳುತ್ತೇವೆ. ಏನು ಹೇಳಿದೆವೋ ಅದನ್ನು ಮಾಡಿಬಿಟ್ಟರು ಎಂದರೆ ಸದಾ ಗುಲಾಬ್ ಜಾಮೂನ್ ಬಾಯಲ್ಲಿರುವುದು. ಪ್ರಪಂಚದವರು ಬಾಯಲ್ಲಿ ಗುಲಾಬ್ ಎಂದು ಹೇಳುತ್ತಾರೆ ಆದರೆ ಕೇವಲ ಗುಲಾಬಿಯಿಂದ ಬಾಯಿ ಸಿಹಿಯಾಗುವುದಿಲ್ಲ ಆದ್ದರಿಂದ ಗುಲಾಬ್ ಜಾಮೂನ್ ಬಾಯಲ್ಲಿರಲಿ ಅಂದರೆ ಸದಾ ಇದೇ ರೀತಿ ಮುಗುಳ್ನಗುತ್ತಾ ಇರಿ. ಒಳ್ಳೆಯದು-

ಕೆಲವರು ಹೊಸ-ಹೊಸ ಮಕ್ಕಳು ಪುನಃ ಮಿಲನ ಮಾಡಲು ಬಂದಿದ್ದಾರೆ. ಯಾರೆಲ್ಲಾ ಈ ಕಲ್ಪದಲ್ಲಿ ಪುನಃ ಮಿಲನವನ್ನು ಆಚರಿಸುತ್ತಿದ್ದೀರೋ ಅಂತಹ ಮಕ್ಕಳಿಗೆ ವಿಶೇಷವಾಗಿ ಬಾಪ್‌ದಾದಾರವರು ಸ್ನೇಹದ ವರದಾನವನ್ನು ಕೊಡುತ್ತಾರೆ. ಸದಾ ತಮ್ಮ ಮಸ್ತಕದಲ್ಲಿ ತಂದೆಯ ಅಭಯಹಸ್ತದ ಅನುಭವ ಮಾಡುತ್ತಾ ನಡೆಯಿರಿ. ಯಾರ ತಲೆಯ ಮೇಲೆ ತಂದೆಯ ಹಸ್ತವಿರುವುದೋ ಅವರು ಸದಾ ಈ ವರದಾನದ ಅನುಭವದಿಂದ ಎಲ್ಲಾ ಮಾತುಗಳಲ್ಲಿ ಸುರಕ್ಷಿತರಾಗಿರುತ್ತಾರೆ. ಈ ವರದಾನದ ಹಸ್ತವು ಪ್ರತಿಯೊಂದು ಮಾತಿನಲ್ಲಿ ತಮಗೆ ಸುರಕ್ಷತೆಯ ಸಾಧನವಾಗಿದೆ. ಎಲ್ಲದಕ್ಕಿಂತ ಅತಿದೊಡ್ಡ ರಕ್ಷಣೆ ಇದೇ ಆಗಿದೆ.

ಬಾಪ್‌ದಾದಾರವರು ಎಲ್ಲಾ ಟೀಚರ್ಸ್ ನಿಮಿತ್ತರಾಗುವ ಧೈರ್ಯವನ್ನು ನೋಡಿ ಖುಷಿಯಾಗಿದ್ದಾರೆ. ಸಾಹಸವನ್ನು ಇಟ್ಟು ನಿಮಿತ್ತರಾಗಿಯೇ ಬಿಡುತ್ತೀರಲ್ಲವೇ. ಟೀಚರ್ ನಿಮಿತ್ತರಾಗುವುದು ಎಂದರೆ ಬೇಹದ್ದಿನ ಮಂಚದ ಮೇಲೆ ಹೀರೊ (ನಾಯಕ)ನ ಪಾತ್ರ ಅಭಿನಯಿಸುವುದು. ಹೇಗೆ ಹದ್ದಿನ ಮಂಚದ ಮೇಲೆ ಹೀರೊ (ನಾಯಕ) ಪಾತ್ರಧಾರಿ ಆತ್ಮನ ಕಡೆಗೆ ಎಲ್ಲರ ವಿಶೇಷ ಗಮನವಿರುತ್ತದೆ, ಆದೇರೀತಿ ಯಾವ ಆತ್ಮರಿಗೆ ನಿಮಿತ್ತರಾಗಿರುತ್ತಾರೋ ವಿಶೇಷವಾಗಿ ಅವರು ಮತ್ತು ಸಾಮಾನ್ಯ ಸರ್ವ ಆತ್ಮರು ನೀವು ನಿಮಿತ್ತರಾಗಿರುವ ಟೀಚರ್ಸ್‌ಅನ್ನು ಅದೇ ದೃಷ್ಟಿಯಿಂದ ನೋಡುತ್ತಾರೆ. ಎಲ್ಲರ ವಿಶೇಷ ಗಮನವಿರುತ್ತದೆಯಲ್ಲವೇ! ಹಾಗಾದರೆ ಟೀಚರ್ಸ್‌ಗೆ ತಮ್ಮಲ್ಲಿಯೂ ವಿಶೇಷ ಗಮನವಿಟ್ಟುಕೊಳ್ಳಬೇಕಾಗುತ್ತದೆ ಯಾಕೆಂದರೆ ಸೇವೆಯಲ್ಲಿ ಹೀರೊ (ನಾಯಕ)ನ ಪಾತ್ರದಾರಿಯಾಗುವುದು ಎಂದರೆ ಹೀರೊ' (ನಾಯಕ) ಆಗುವುದು. ಆಶೀರ್ವಾದಗಳು ಸಹ ಟೀಚರಸ್‌ಗೆ ಹೆಚ್ಚು ಸಿಗುತ್ತದೆ. ಎಷ್ಟು ಆಶೀರ್ವಾದ ಸಿಗುವುದು ಅಷ್ಟು ತಮ್ಮ ಮೇಲೆ ಗಮನ ಕೊಡುವ ಆವಶ್ಯಕತೆಯಿದೆ. ಇದು ಸಹ ಡ್ರಾಮಾನುಸಾರ ವಿಶೇಷ ಭಾಗ್ಯವಾಗಿದೆ. ಸದಾ ಪ್ರಾಪ್ತಿಯಾಗಿರುವ ಭಾಗ್ಯವನ್ನು ಹೆಚ್ಚಿಸುತ್ತಾ ಹೋಗಿ. ನೂರರಿಂದ ಸಾವಿರ. ಸಾವಿರರಿಂದ ಲಕ್ಷ, ಲಕ್ಷದಿಂದ ಕೋಟಿ, ಕೋಟಿಯಿಂದ ಪದಮ, ಪದಮದಿಂದ ಪದಮಾಪದಮ. ಸದಾ ಈ ಭಾಗ್ಯವನ್ನು ಹೆಚ್ಚಿಸುತ್ತಾ ಹೋಗಬೇಕಾಗಿದೆ. ಇದಕ್ಕೆ ಯೋಗ್ಯ ಆದರ್ಶ ಟೀಚರೆಂದು ಹೇಳಲಾಗುತ್ತದೆ. ಬಾಪ್‌ದಾದಾರವರು ನಿಮಿತ್ತರಾಗಿರುವ ಮಕ್ಕಳ ಸ್ಮರಣೆಯನ್ನು ಅವಶ್ಯವಾಗಿ ಮಾಡುತ್ತಾರೆ ಮತ್ತು ಸದಾ ಅಮೃತವೇಳೆ "ವಾಹ್ ಮಕ್ಕಳೇ ವಾಹ್" ಈ ಆಶೀರ್ವಾದಗಳನ್ನು ಕೊಡುತ್ತಾರೆ. ಸೇವಾಧಾರಿಗಳು ಕೇಳಿದ್ದೀರಾ. ಟೀಚರ್ ಎಂದರೆ ನಂಬರ್‌ವನ್ ಸೇವಾಧಾರಿ! ಒಳ್ಳೆಯದು.

**ನಾಲ್ಕಾರು ಕಡೆಯ ಅನೇಕ ಕಲ್ಪಗಳಲ್ಲಿ ಅತೀತ ಮತ್ತು ಪ್ರಿಯ ಮಿಲನವನ್ನು ಆಚರಿಸುವವರು. ಸದಾ ಪ್ರಾಪ್ತಿಯಾಗಿರುವ ಆಸ್ತಿಯ(ವಾರಸತ್ವ) ಖಜಾನೆಗಳನ್ನು ಪ್ರತೀ ಸಮಯ ಪ್ರಮಾಣ ಕಾರ್ಯದಲ್ಲಿ ತೊಡಗಿಸುವವರು, ಸದಾ ಹೃದಯದಿಂದ ಅತಿಸ್ನೇಹಿ ಮತ್ತು ತಂದೆಯ ಸಮಾನರಾಗಿ ಸ್ವಯಂನ ಮೂಲಕ ತಂದೆಯ ಅನುಭವ ಮಾಡಿಸುವವರು, ಸದಾ ಸ್ಮೃತಿ ಸ್ವರೂಪರಿಂದ ಭಕ್ತರ ಮೂಲಕ ಸಮರ್ಥ ಸ್ವರೂಪರಾಗುವವರು, ಸದಾ ತಮ್ಮ ಪ್ರಾಪ್ತಿಯಾಗಿರುವ ಭಾಗ್ಯವನ್ನು ಹಂಚುವವರು ಅರ್ಥಾತ್ ಹೆಚ್ಚಿಸಿಕೊಳ್ಳುವವರು, ಇಂತಹ ಮಾಸ್ಟರ್ ದಾತಾ ಸಮರ್ಥ ಮಕ್ಕಳಿಗೆ ಬಾಪ್ ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

**ಡಬಲ್ ವಿದೇಶಿ ಸಹೋದರ-ಸಹೋದರಿಯರೊಂದಿಗೆ ಗ್ರೂಪ್ ವೈಸ್ ವಾರ್ತಾಲಾಪ:-**

1. ಎಲ್ಲರೂ ತಮ್ಮನ್ನು ಅತ್ಯಂತ ಭಾಗ್ಯಶಾಲಿಯೆಂದು ತಿಳಿಯುವಿರಾ? ಏಕೆಂದರೆ ಇಂತಹ ಶ್ರೇಷ್ಠಾತ್ಮರಾಗುವೆವು ಎಂದು ಎಂದಿಗೂ ಸ್ವಪ್ನದಲ್ಲಿಯೂ ಸಂಕಲ್ಪವಿರಲಿಲ್ಲ ಆದರೆ ಈಗ ಸಾಕಾರದಲ್ಲಾಯಿತು! ಬಾಪ್‌ದಾದಾರವರು ಎಲ್ಲೆಲ್ಲಿಂದ ಆಯ್ಕೆ ಮಾಡುತ್ತಾ, ರತ್ನಗಳ ಮಾಲೆಯನ್ನು ಮಾಡಿದ್ದಾರೆ ನೋಡಿರಿ! ಬ್ರಾಹ್ಮಣ ಪರಿವಾರದ ಮಾಲೆಯಲ್ಲಿ ಪೋಣಿಸಿದರು. ಹಾಗಾದರೆ ಮಾಲೆಯಿಂದ ಎಂದಿಗೂ ಹೊರಬರುವುದಿಲ್ಲವೇ? ಯಾವುದೇ ಮಾಲೆಯ ವಿಶೇಷತೆ ಹಾಗೂ ಸುಂದರತೆಯೇನಾಗಿದೆ? ಮಣಿಯು ಮಣಿಯೊಂದಿಗೆ ಮಿಲನವಾಗಿರುತ್ತದೆ. ಒಂದುವೇಳೆ ಮಧ್ಯದಲ್ಲೇನಾದರೂ ದಾರವು ಕಾಣಿಸಿತೆಂದರೆ, ಮಣಿಯು ಮಣಿಯೊಂದಿಗೆ ಜೋಡಣೆಯಾಗಿಲ್ಲದಿದ್ದರೆ ಚೆನ್ನಾಗಿ ಕಾಣಿಸುವುದಿಲ್ಲ. ಅಂದಾಗ ತಾವು ಬ್ರಾಹ್ಮಣ ಪರಿವಾರದ ಮಾಲೆಯಲ್ಲಿದ್ದೀರಿ ಅರ್ಥಾತ್ ಸರ್ವಬ್ರಾಹ್ಮಣ ಆತ್ಮರ ಸಮೀಪದಲ್ಲಿದ್ದೀರಿ. ಹೇಗೆ ತಾವು ತಂದೆಯ ಸಮೀಪವಿದ್ದೀರಿ ಹಾಗೆಯೇ ತಂದೆಯ ಜೊತೆಜೊತೆಗೆ ಪರಿವಾರದ ಸಮೀಪದಲ್ಲಿಯೂ ಇದ್ದೀರಿ ಏಕೆಂದರೆ ಈಗ ಈ ಪರಿವಾರವು ಸಹ ಇದೇ ಪರಿಚಯದಿಂದ ಮಿಲನವಾಗುತ್ತದೆ. ಪರಿವಾರದಲ್ಲಿ ಮಜಾ ಬರುತ್ತದೆಯಲ್ಲವೆ? ಕೇವಲ ತಂದೆಯ ನೆನಪಿನಲ್ಲಷ್ಟೇ ಮಜಾ ಬರುತ್ತದೆ ಎಂದಲ್ಲ, ಯೋಗವನ್ನು ಪರಿವಾರದೊಂದಿಗೆ ಇಡುವುದಿಲ್ಲ ಆದರೆ ಒಬ್ಬರಿನ್ನೊಬ್ಬರ ಸಮೀಪವಿರಬೇಕು. ಎಲ್ಲಿಯೇ ಇಷ್ಟು ದೊಡ್ಡದಾದ ಒಂದುವರೆ ಲಕ್ಷ ಮಂದಿಯ ಪರಿವಾರವೇನಾದರೂ ಆಗುತ್ತದೆಯೇ? (ಈಗಂತು 9-10 ಲಕ್ಷಕ್ಕಿಂತಲೂ ದೊಡ್ಡದಾದ ಪರಿವಾರವಿದೆ) ಅಂದಮೇಲೆ ಪರಿವಾರವು ಇಷ್ಟವಾಗುತ್ತದೆಯೇ ಅಥವ ಕೇವಲ ಬಾಬಾರವರಷ್ಟೇ ಇಷ್ಟವಾಗುವರೇ? ಯಾರಿಗೆ ಕೇವಲ ಬಾಬಾರವರಷ್ಟೇ ಇಷ್ಟವಾಗುವರು. ಅವರು ಪರಿವಾರದಲ್ಲಿ ಬರಲು ಸಾಧ್ಯವಿಲ್ಲ. ಬಾಪ್‌ದಾದಾರವರಿಗೆ ಪರಿವಾರವನ್ನು ನೋಡುತ್ತಾ ಸದಾ ಹರ್ಷಿತವಾಗುತ್ತದೆ ಹಾಗೂ ಸದಾ ಒಬ್ಬರಿನ್ನೊಬ್ಬರ ವಿಶೇಷತೆಯನ್ನು ನೋಡಿ ಹರ್ಷಿತವಾಗುತ್ತಾರೆ. ಪ್ರತಿಯೊಂದು ಬ್ರಾಹ್ಮಣ ಆತ್ಮನ ಬಗ್ಗೆ ಸದಾ ಇದೇ ಸಂಕಲ್ಪವಿರುತ್ತದೆ- ವಾಹ್ ಬ್ರಾಹ್ಮಣ ಆತ್ಮವೇ ವಾಹ್! ನೋಡಿ- ತಂದೆಗೆ ಮಕ್ಕಳೊಂದಿಗೆ ಇಷ್ಟೂ ಪ್ರೀತಿಯಿದೆ ಆದ್ದರಿಂದ ಬರುವರಲ್ಲವೆ, ಇಲ್ಲದಿದ್ದರೆ ಮೇಲೆ ಕುಳಿತುಕೊಂಡಿದ್ದೇ ಭೇಟಿಯಾಗುತ್ತಿದ್ದರು. ತಂದೆಯು ಕೇವಲ ಮೇಲಿಂದಂತು ಕುಳಿತು ಭೇಟಿಯಾಗುವುದಿಲ್ಲ, ತಾವೂ ವಿದೇಶದಿಂದ ಬರುತ್ತೀರಿ ಅಂದಮೇಲೆ ಬಾಪ್ ದಾದಾರವರೂ ವಿದೇಶದಿಂದ ಬರುತ್ತಾರೆ. ಬಹಳಷ್ಟು ದೂರದಿಂದ ಅಂದರೆ ಅತಿದೂರದಿಂದ ಬರುತ್ತಾರೆ ಆದರೆ ಬರುತ್ತಾರೆ. ಒಂದು ಸೆಕೆಂಡಿನಲ್ಲಿ ತಾವೆಲ್ಲರೂ ಸಹ ಸೆಕೆಂಡಿನಲ್ಲಿ ಹಾರುವ ಕಲೆಯ ಅನುಭವ ಮಾಡುತ್ತೀರಾ? ಸೆಕೆಂಡಿನಲ್ಲಿ ಹಾರಲು ಸಾಧ್ಯವಿದೆಯೇ? ಇಷ್ಟು ಡಬಲ್ ಲೈಟ್ ಆಗಿದ್ದೀರಾ, ಸಂಕಲ್ಪ ಮಾಡಿದ ಕೂಡಲೆ ತಲುಪಿಬಿಡಬೇಕು. ಪರಮಧಾಮ ಎಂದು ಹೇಳಲಾಯಿತು, ತಲುಪಿದಿರಿ- ಇಷ್ಟು ಅಭ್ಯಾಸವಿದೆಯೇ? ಎಲ್ಲಿಯೂ ಸಿಲುಕುವುದಿಲ್ಲವೇ? ಎಂದಿಗೂ ಯಾವುದೇ ಅಡಚಣೆಗಳು ಬೇಸರ ಪಡಿಸುವುದಿಲ್ಲವೇ, ಎಚ್ಚರಿಕೆಯಿಂದ ಹಾಗೂ ಲಕ್ಷ್ಯದ ಸ್ಪಷ್ಟತೆಯೂ ಇದೆಯಲ್ಲವೆ.

ಡಬಲ್ ವಿದೇಶಿ ಮಕ್ಕಳು ಬರುತ್ತಿದ್ದಂತೆಯೇ ಸೇವಾಕೇಂದ್ರವು ಸಿಕ್ಕಿಬಿಡುತ್ತದೆ. ಬಹಳ ಬೇಗನೆ ಟೀಚರ್ ಆಗಿಬಿಡುತ್ತಾರೆ ಆದ್ದರಿಂದ ಸೇವೆ ಮಾಡುವುದಕ್ಕೂ ಆಶೀರ್ವಾದಗಳು ಲಭಿಸುತ್ತವೆ. ಆಶೀರ್ವಾದ ಸಿಗುವ ವಿಶೇಷ ಲಿಫ್ಟ್ ಸಿಗುತ್ತದೆ, ಜೊತೆಜೊತೆಗೆ ಬರುತ್ತಿದ್ದಂತೆಯೇ ಇಷ್ಟೂ ವ್ಯಸ್ತವಾಗಿಬಿಡುತ್ತೀರಿ. ಅನ್ಯ ಮಾತುಗಳಿಗಾಗಿ ಸಮಯವೇ ಸಿಗುವುದಿಲ್ಲ ಆದ್ದರಿಂದ ಬ್ಯುಸಿಯಾಗುವುದರಿಂದ ಗಾಬರಿಯಾಗಬಾರದು, ಇದು ಶುಭಸಂಕೇತವಾಗಿದೆ. ಕೆಲವರು ಹೇಳುತ್ತಾರಲ್ಲವೆ- ಲೌಕಿಕ ಕಾರ್ಯವನ್ನೂ ಮಾಡಿರಿ ಹಾಗೂ ಅಲೌಕಿಕ ಸೇವೆಯನ್ನೂ ಮಾಡಿರಿ ಮತ್ತು ತಮ್ಮ ಸೇವೆಯನ್ನು ಮಾಡಿರಿ- ಇದರಲ್ಲಂತು ಹೀಗು ವ್ಯಸ್ತವಾಗಿರುವುದು ಅರ್ಥಾತ್ ಅಲೌಕಿಕ ವ್ಯಸ್ತವಾಗಿರಬೇಕಾಗುವುದು. ಮಾಯಾಜೀತರಾಗುವುದು. ಸರಿಯೆನಿಸುವುದೇ ಅಥವಾ ಲೌಕಿಕ ಕಾರ್ಯವನ್ನು ಮಾಡುವುದು ಕಷ್ಟವೇ? ಲೌಕಿಕ ನೌಕರಿಯನ್ನೇನು ಮಾಡುತ್ತೀರಿ ಅದರಲ್ಲೇನು ಸಂಪಾದನೆಯಾಗುವುದು, ಅದನ್ನು ಎಲ್ಲಿಗೆ ಉಪಯೋಗಿಸುತ್ತೀರಿ? ಹೇಗೆ ಸಮಯವನ್ನು ಉಪಯೋಗ ಮಾಡುತ್ತೀರಿ ಹಾಗೆಯೇ ಧನವನ್ನೂ ಉಪಯೋಗಿಸುತ್ತೀರಿ. ಅಂದಮೇಲೆ

ತನು-ಮನ-ಧನ ಮೂರೂ ಉಪಯೋಗವಾಗುತ್ತದೆ. ಸಫಲವಾಗುತ್ತದೆ ಅಲ್ಲವೇ ಆದ್ದರಿಂದ ಸುಸ್ತಾಗುವುದಿಲ್ಲ. ಸೇವಾಕೇಂದ್ರವನ್ನು ತೆರೆಯುತ್ತೀರೆಂದರೆ ಎಷ್ಟೊಂದು ಅತ್ಮರು ಸಂದೇಶವನ್ನು ಕೇಳುತ್ತಿದ್ದಂತೆಯೇ ಕಲ್ಯಾಣವಾಗುವುದು. ಹಾಗಾದರೆ ಮನಸ್ಸು ಹಾಗೂ ಧನದ ಸಂಬಂಧವಿದೆ. ಎಲ್ಲಿ ಧನವಿರುತ್ತದೆಯೋ ಅಲ್ಲಿ ಮನಸ್ಸಿರುತ್ತದೆ ಎಲ್ಲಿ ಮನಸ್ಸಿರುತ್ತದೆಯೋ ಅಲ್ಲಿ ಧನವಿರುತ್ತದೆ. ಬಾಪ್‌ದಾದಾರವರಿಗೆ ಡಬಲ್ ವಿದೇಶಿಗಳಿಗೆ ಸರ್ವಪ್ರಕಾರದಲ್ಲಿಯೂ ಸಫಲ ಮಾಡುವುದರಲ್ಲಿ ಬ್ಯುಸಿಯಾಗಿರುವುದನ್ನು ನೋಡುತ್ತಾ ಖುಷಿಯಾಗುತ್ತದೆ. ಎಲ್ಲರೂ ಸುವರ್ಣಾವಕಾಶ ತೆಗೆದುಕೊಳ್ಳುವವರು ಆಗಿದ್ದೀರಿ. ಸದಾ ನೆನಪಿಟ್ಟುಕೊಳ್ಳಿರಿ- ಸಫಲತಾಮೂರ್ತಿ ಆಗಿದ್ದೇವೆ ಮತ್ತು ಸದಾ ಸಫಲತೆಯು ನನ್ನ ಕೊರಳಿನ ಮಾಲೆಯಾಗಿದೆ. ಯಾವುದೇ ಕಾರ್ಯವನ್ನು ಮಾಡುವ ಮೊದಲು ಇದನ್ನು ಯೋಚಿಸಿರಿ- ಸಫಲತೆಯು ನನ್ನ ಕೊರಳಿನಹಾರವಾಗಿದೆ. ಹೇಗೆ ಸ್ಮೃತಿಯಿರುತ್ತದೆಯೋ ಹಾಗೆಯೇ ಪ್ರತ್ಯಕ್ಷಫಲವು ಸಿಗುವುದು. ಒಳ್ಳೆಯದು-

2. ಈ ಮಧುರ ಶಾಂತಿಯು ಪ್ರಿಯವೆನಿಸುತ್ತದೆಯಲ್ಲವೆ? ಏಕೆಂದರೆ ಆತ್ಮನ ಸತ್ಯ ಸ್ವರೂಪವೇ ಮಧುರ ಶಾಂತಿಯಾಗಿದೆ ಅಂದಮೇಲೆ ಯಾವ ಸಮಯದಲ್ಲಿ ಬೇಕೋ ಅದೇ ಸಮಯದಲ್ಲಿ ಮಧುರ ಶಾಂತಿಯ ಸ್ಥಿತಿಯ ಅನುಭವ ಮಾಡಬಲ್ಲಿರಾ? ಏಕೆಂದರೆ ಈಗ ಆತ್ಮವು ಇವೆಲ್ಲಾ ಬಂಧನಗಳಿಂದ ಮುಕ್ತವಾಗಿಬಿಟ್ಟಿದೆ ಆದ್ದರಿಂದ ಯಾವಾಗ ಬೇಕೋ ಆಗ ತಮ್ಮ ಸತ್ಯ ಸ್ವರೂಪ ಸ್ಥಿತಿಯಲ್ಲಿ ಸ್ಥಿತನಾಗಿಬಿಡುತ್ತದೆ. ಅಂದಮೇಲೆ ಬಂಧನಮುಕ್ತರಾಗಿದ್ದೀರಾ ಅಥವ ಆಗಬೇಕಾಗಿದೆಯೇ? ಈ ಬಾರಿ ಮಧುಬನದಲ್ಲಿ ಎರಡು ಶಬ್ಧಗಳನ್ನು ಬಿಟ್ಟು ಹೋಗಿರಿ- ಸಮ್ ತಿಂಗ್ ಮತ್ತು ಸಮ್ ಟೈಮ್. ಇದು ಇಷ್ಟವಿದೆವೇ? ಎಲ್ಲರೂ ಬಿಡುವಿರಾ? ಸಾಹಸವನ್ನಿಡುವುದರಿಂದ ಸಹಯೋಗ ಸಿಗುವುದು ಏಕೆಂದರೆ 63 ಜನ್ಮಗಳಲ್ಲಿ ಅನೇಕ ಬಂಧನಗಳಲ್ಲಿಯೇ ಇದ್ದಿರೆನ್ನುವುದು ಗೊತ್ತಿದೆ ಮತ್ತು ಈ ಒಂದು ಜನ್ಮದಲ್ಲಿ ಸ್ವತಂತ್ರರಾಗಬೇಕಾಗಿದೆ. ಇದರ ಫಲವೇ ಅನೇಕ ಜನ್ಮಗಳಿಗಾಗಿ ಜೀವನ್ಮುಕ್ತಿಯು ಪ್ರಾಪ್ತಿಯಾಗುವುದು. ಅಂದಮೇಲೆ ಇಲ್ಲಿಯೇ ಅದರ ಬುನಾದಿ ಹಾಕಬೇಕಾಗಿದೆ. ಯಾವಾಗ ಬುನಾದಿಯು ಇಷ್ಟು ಪರಿಪಕ್ವವಾಗುವುದೋ ಆಗ 21 ಜನ್ಮಗಳವರೆಗೆ ನಡೆಯುತ್ತದೆ. ತಮ್ಮಲ್ಲಿ ಎಷ್ಟು ನಿಶ್ಚಯವನ್ನಿಡುವಿರಿ ಅಷ್ಟು ನಶೆಯಿರುವುದು. ತಂದೆಯಲ್ಲಿಯೂ, ತಮ್ಮಲ್ಲಿಯು ಹಾಗೂ ಡ್ರಾಮಾದಲ್ಲಿಯೂ ನಿಶ್ಚಯವಿರಲಿ. ಮೂರರಲ್ಲಿಯೂ ಉತ್ತೀರ್ಣರಾಗಬೇಕು. ಒಳ್ಳೆಯದು- ಒಂದೊಂದು ರತ್ನದ ವಿಶೇಷತೆಯು ತನ್ನದೇ ಆಗಿದೆ. ಬಾಪ್‌ದಾದಾರವರು ಎಲ್ಲರ ವಿಶೇಷತೆಯನ್ನು ತಿಳಿದಿದ್ದಾರೆ. ಈಗ ಮುಂದೆ ನಡೆದಂತೆ ಇನ್ನಷ್ಟು ತಮ್ಮ ವಿಶೇಷತೆಯನ್ನು ಕಾರ್ಯದಲ್ಲಿ ಉಪಯೋಗಿಸುತ್ತೀರೆಂದರೆ, ವಿಶೇಷತೆಯು ವೃದ್ಧಿಯಾಗುವುದು. ಪ್ರಪಂಚದಲ್ಲಿ ಖರ್ಚು ಮಾಡುವುದರಿಂದ ಹಣದ ಕೊರತೆಯಾಗುವುದು. ಆದರೆ ಇಲ್ಲಿ ಎಷ್ಟು ಉಪಯೋಗಿಸುತ್ತೀರಿ, ಖರ್ಚು ಮಾಡುವಿರಿ ಅಷ್ಟು ಹೆಚ್ಚಾಗುವುದು. ಎಲ್ಲರೂ ಅನುಭವಿ ಆಗಿದ್ದೀರಲ್ಲವೆ. ಅಂದಮೇಲೆ ಈ ವರ್ಷದಲ್ಲಿ ಇದೇ ವರದಾನವನ್ನು ನೆನಪಿಟ್ಟುಕೊಳ್ಳಿರಿ- ನಾವು ವಿಶೇಷ ಆತ್ಮರಾಗಿದ್ದೇವೆ ಮತ್ತು ವಿಶೇಷತೆಯನ್ನು ಕಾರ್ಯದಲ್ಲಿ ಉಪಯೋಗಿಸುತ್ತಾ ಮುಂದುವರೆಯುತ್ತೇವೆ. ಹೇಗೆ ಇಲ್ಲಿ ಸಮೀಪದಲ್ಲಿ ಕುಳಿತುಕೊಳ್ಳುವುದು ಪ್ರಿಯವೆಸುತ್ತದೆಯೋ ಹಾಗೆಯೇ ಅಲ್ಲಿಯೂ ಸದಾ ಸಮೀಪದಲ್ಲಿರಬೇಕು. ಬಾಪ್‌ದಾದಾರವರು ಸದಾ ಪ್ರತಿಯೊಬ್ಬರನ್ನೂ 'ಇದೇ ಶ್ರೇಷ್ಠ ದೃಷ್ಟಿಯಿಂದ ನೋಡುತ್ತಾರೆ- ಒಂದೊಂದು ಮಗುವು ಯೋಗಿಯೂ ಆಗಿದ್ದಾರೆ ಮತ್ತು ಯೋಗ್ಯರೂ ಆಗಿದ್ದಾರೆ. ಒಳ್ಳೆಯದು-

ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 13-03-1990.

*ಸಂಗಮದಲ್ಲಿ ಆತ್ಮರೊಂದಿಗೆ ಪರಮಾತ್ಮನ ವಿಚಿತ್ರ ಮಿಲನ.*

ಅನೇಕ ಬಾರಿ ಮಿಲನ ಮಾಡಿಕೊಂಡಿದ್ದೇವೆ. ಮತ್ತೆ ಈಗಲೂ ಮಿಲನ ಮಾಡಿಕೊಳ್ಳುತ್ತಿದ್ದೇವೆ ಎಂಬ ಸ್ಮೃತಿಯಲ್ಲಿ ಒಬ್ಬ ಪರಮಾತ್ಮನೇ ಮಿಲನ ಮಾಡುತ್ತಾರೆ. ಮತ್ತಾರು ಈ ಸ್ಪಷ್ಟ ಸ್ಮೃತಿಯಿಂದ ಆತ್ಮರೊಂದಿಗೆ ಮಿಲನ ಮಾಡಲು ಸಾಧ್ಯವಿಲ್ಲ. ಈ ಕಲ್ಪದಲ್ಲಿ ಮೊದಲ

ಬಾರಿ ಮಿಲನ ಮಾಡುತ್ತಿದ್ದರೂ ಹಳೆಯ ಸ್ಮೃತಿ, ಹಳೆಯ ಪರಿಚಯವು ಆತ್ಮನಲ್ಲಿ ಸಂಸ್ಕಾರ ರೂಪದಲ್ಲಿ ರೆಕಾರ್ಡ್ನಂತೆ ತುಂಬಲ್ಪಟ್ಟಿರುವುದು ಮತ್ತು ಹೃದಯದಿಂದ, ಸ್ಮೃತಿಯ ಕೂಗು ಕೇಳಿ ಬರುತ್ತದೆ ಇವರೇ ನನ್ನ ತಂದೆಯಾಗಿದ್ದಾರೆ, ನೀವೇ ನನ್ನ ಮಕ್ಕಳಾಗಿದ್ದೀರಿ ಎಂದು ಆ ಶಕ್ತಿಶಾಲಿ ಸ್ಮೃತಿಯಿಂದ ಸಮರ್ಥ ಸ್ವರೂಪರಾದಿರಿ. 1.ಯಾರು ಎಷ್ಟು ಸ್ಮೃತಿಯಲ್ಲಿರುತ್ತೀರೋ ಅಷ್ಟೇ ಸಮರ್ಥತೆಯ ಅಧಿಕಾರ ಸ್ವಯಂ ಸ್ವತಹವಾಗಿ ಬರುತ್ತದೆ. 2. ಹೇಗೆ ಶರೀರದ ನರನರದಲ್ಲಿ ರಕ್ತ ಸಮಾವೇಶವಾಗಿದೆಯೋ ಹಾಗೆಯೇ ಆತ್ಮನಲ್ಲಿ ಸ್ಮೃತಿಯು ಸಮಾವೇಶವಾಗಿರುತ್ತದೆ. ಇದನ್ನೇ ಹೃದಯದ ಸ್ನೇಹ ಸಂಪನ್ನ ನಿರಂತರ ಸ್ಮೃತಿ ಎಂದು ಕರೆಯುತ್ತಾರೆ. ಎಂದು ಹೇಳುತ್ತಾ ಶಿವ ಪರಮಾತ್ಮ ತಿಳಿಸಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

***ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.***

ನಾನಾತ್ಮ ಶಾಂತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸ್ಮೃತಿ ಸ್ವರೂಪವಾದುದರ ಫಲಿತವಾಗಿ ಸಮರ್ಥ ಸ್ವರೂಪವಾಗಿದ್ದೇನೆ.

2. ನಾನು ಹೃದಯಪೂರ್ವಕ ಸ್ನೇಹ ಮತ್ತು ಅತಿಪ್ರಿಯ, ಅತಿ ಸಮೀಪ ಸಂಬಂಧದಲ್ಲಿ ಇರುವ ಸ್ಮೃತಿ ಸ್ವರೂಪ.

2. ನಾನು ನನ್ನ ಬಾಬಾ ಎನ್ನುವುದರಿಂದ ತಂದೆಯ ಸರ್ವ ಪ್ರಾಪ್ತಿಗಳ ಆಸ್ತಿಗೆ (ವಾರಸತ್ವಕ್ಕೆ) ಅಧಿಕಾರಿ.

3. ನಾನು ಸ್ವಯಂ ಅಥವಾ ಸೇವೆಯ ಪ್ರತಿ ಖಜಾನೆಗಳನ್ನು ಕಾರ್ಯದಲ್ಲಿ ಉಪಯೋಗಿಸಿ ಅದರ ಲಾಭವನ್ನು ಅನುಭವ ಮಾಡಿಕೊಂಡು ಸದಾ ಖುಷಿಯ ನಶೆಯಲ್ಲಿ ಇದ್ದೇನೆ.

4. ನಾನು ಸದಾ ನನ್ನ ಮಸ್ತಕದ ಮೇಲೆ ತಂದೆಯ ಅಭಯಹಸ್ತ ಇದ್ದ ಹಾಗೆ ಸ್ನೇಹದ ವರದಾನವನ್ನು ಅನುಭವ ಮಾಡಿಕೊಂಡು ಎಲ್ಲಾ ವಿಷಯಗಳಲ್ಲಿ ಸುರಕ್ಷಿತವಾಗಿ ಇದ್ದೇನೆ.

5. ನಾನು ಬೇಹದ್ ಸ್ಟೇಜ್ ನ ಮೇಲೆ ಹೀರೋ ಪಾತ್ರವನ್ನು ಅಭಿನಯಿಸುತ್ತಿರುವ ನಿಮಿತ್ತ ಟೀಚರ್.

6. ನಾನು ಎಲ್ಲರ ಭಾಗ್ಯವನ್ನು ಹೆಚ್ಚಿಸುತ್ತಾ ಹೋಗುವ ಯೋಗ್ಯ ಆದರ್ಶ ಟೀಚರ್.

7. ನಾನು ನಂಬರ್‌ವನ್ ಸೇವಾಧಾರಿ.